**ಸಾಕ್ಷಿಯನ್ನು ದಿಃ 18.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಬಿ.ಬಿ ವಕೀಲರಿಂದಃ**

ನನ್ನ ತಂದೆಯ ಹೆಸರು ಗೌಡಯ್ಯ. ಗೌಡಯ್ಯರವರ ಸಹೋದರರು ತಿಮ್ಮೇಗೌಡ ಹಾಗೂ ಕರೀಗೌಡ ಆಗಿರುತ್ತಾರೆ. ದಾವ ಆಸ್ತಿಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ತಿಮ್ಮೇಗೌಡ ರವರ ಮಗಳು 1 ನೇ ವಾದಿ ಮರೀದೇವಮ್ಮ ಎಂದರೆ ಸರಿ. ತಿಮ್ಮೇಗೌಡರವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಅವರೆಂದರೆ, ತಿಮ್ಮಮ್ಮ, ಚಿಕ್ಕತಾಯಮ್ಮ, ದೇವಮ್ಮ ಹಾಗೂ ಮರಿದೇವಮ್ಮ. ನನ್ನ ತಂದೆ ಹಾಗೂ ಚಿಕ್ಕಪ್ಪಂದಿರು ಆಸ್ತಿಗಳನ್ನು 1966 ರಲ್ಲಿ ವಿಭಾಗ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ, ಅವರವರ ಜಮೀನಿನ ಸ್ವಾಧೀನದಲ್ಲಿ ಅವರವರು ಇದ್ದಾರೆ ಎಂದು ಉತ್ತರಿಸಿರುತ್ತಾರೆ. ಗೌಡಯ್ಯ, ಡೊಳ್ಳಯ್ಯ ಇವರೆಲ್ಲ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿ. ಸರ್ವೇ ನಂ. 13/1 ಗೌಡಯ್ಯ ಇವರ ಹೆಸರಿನಲ್ಲಿ 21 ಗುಂಟೆ ಹಾಗೂ ಕರೀಗೌಡ ಇವರ ಹೆಸರಿನಲ್ಲಿ 1 ಎಕರೆ 1 ಗುಂಟೆ ಇದೆ ಎಂದರೆ ಸರಿ. ನಿಪಿ. 11 ರಲ್ಲಿ ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ. 12 /ಸರ್ವೇ ನಂ. 13/2 ರಲ್ಲಿ ತಿಮ್ಮಯ್ಯ ಬಿನ್ ಡೊಳ್ಳೇಗೌಡ ಇವರ ಹೆಸರಿನಲ್ಲಿ 1 ಎಕರೆ 1 ಗುಂಟೆ, ಚಲುವ ಬಿನ್ ತಿಮ್ಮಯ್ಯ ಇವರ ಹೆಸರಿನಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿ. ನಿಪಿ. 12 ರಲ್ಲಿಯೂ ಸದರಿ ಆಸ್ತಿ ಪಿತ್ರಾರ್ಜಿತ ಎಂದು ನಮೂದಾಗಿದೆ ಎಂದರೆ ಸರಿ. ಸರ್ವೇ ನಂ. 18/1 ರಲ್ಲಿ ಒಟ್ಟು 2 ಎಕರೆ 16 ಗುಂಟೆ ಹೊಂಬಾಳಮ್ಮ, ತಿಮ್ಮಯ್ಯ, ಡೊಳ್ಳಯ್ಯ, ಕರೀಗೌಡ ಹಾಗೂ ಸ್ವಾಮಿ ಇವರ ಜಂಟಿ ಸ್ವಾದೀನದಲ್ಲಿದೆ ಎಂದರೆ ಸಾಕ್ಷಿಯು ಅವರು 1966 ರಲ್ಲಿಯೇ ವಿಭಾಗ ಮಾಡಿಕೊಂಡು ಅವರವರ ಸ್ವಾಧೀನದಲ್ಲಿದ್ದಾರೆ ಎಂದು ಉತ್ತರಿಸಿರುತ್ತಾರೆ. 1960 ನೇ ಇಸವಿಯಲ್ಲಿ ನನಗೆ 2-3 ವರ್ಷ ವಯಸ್ಸು ಇದ್ದಿರಬಹುದು. ನಿಪಿ. 13 ರಲ್ಲಿಯೂ ಸಹ ಪಿತ್ರಾರ್ಜಿತ ಆಸ್ತಿ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ. 14/ಸರ್ವೇ ನಂ. 24/1 ರಲ್ಲಿ ಹೊಂಬಾಳಮ್ಮ, ತಿಮ್ಮಯ್ಯ, ಡೊಳ್ಳಯ್ಯ, ಕರೀಗೌಡ ಹಾಗೂ ಸ್ವಾಮಿ ಇವರ ಜಂಟಿ ಸ್ವಾದೀನದಲ್ಲಿದೆ ಎಂದರೆ ಸರಿ. ಹೊಂಬಾಳಮ್ಮ ರವರು ತೀರಿಹೋಗಿರುತ್ತಾರೆ. ಈ ದಾವೆ ಹಾಕುವ ಸಮಯದಲ್ಲಿ ಹೊಂಬಾಳಮ್ಮ ಜೀವಂತವಾಗಿದ್ದರು. ಸರ್ವೇ ನಂ. 24/3

ಹೊಂಬಾಳಮ್ಮ, ತಿಮ್ಮಯ್ಯ, ಡೊಳ್ಳಯ್ಯ, ಕರೀಗೌಡ ಹಾಗೂ ಸ್ವಾಮಿ ಇವರ ಜಂಟಿ ಸ್ವಾಧೀನದಲ್ಲಿದೆ ಎಂದರೆ ಸರಿ. ನಿಪಿ. 17/ಸರ್ವೇ ನಂ. 25/1 ರಲ್ಲಿ 1 ಎಕರೆ ಜಮೀನು ಹೊಂಬಾಳಮ್ಮ, ತಿಮ್ಮಯ್ಯ, ಡೊಳ್ಳಯ್ಯ, ಕರೀಗೌಡ ಹಾಗೂ ಸ್ವಾಮಿ ಇವರ ಜಂಟೀ ಸ್ವಾಧೀನದಲ್ಲಿದೆ ಎಂದರೆ ಸರಿ. ಸರ್ವೇ ನಂ. 25/3 ನಮ್ಮ ಪಿತ್ರಾರ್ಜಿತ ಸ್ವತ್ತಾಗಿದ್ದು ಅದು ಹೊಂಬಾಳಮ್ಮ, ತಿಮ್ಮಯ್ಯ, ಡೊಳ್ಳಯ್ಯ, ಕರೀಗೌಡ ಹಾಗೂ ಸ್ವಾಮಿ ಇವರ ಜಂಟೀ ಸ್ವಾಧೀನದಲ್ಲಿದೆ ಎಂದರೆ ಸರಿ. ಸದರಿ ಎಲ್ಲಾ ಆಸ್ತಿಗಳು ಡೊಳ್ಳಯ್ಯ ಎಂದರೆ ನನ್ನ ತಾತ ರವರ ಆಸ್ತಿ ಎಂದರೆ ಸರಿ.

ಯಾಂದಳ್ಳಿ ಗ್ರಾಮದಲ್ಲಿರುವ ನಾಲ್ಕು ಕಂಬದ ಎರಡು ಮನೆಗಳು ಸಹ ಪಿತಾರ್ಜಿತ ಆಸ್ತಿಗಳು ಎಂದರೆ ಸರಿ. ಡೊಳ್ಳಯ್ಯರವರು ತೀರಿಹೋದ ನಂತರ ಸದರಿ ಆಸ್ತಿಗಳು ಏನಾದವು ಎಂದು ಗೊತ್ತಿಲ್ಲ. ಮುಂದುವರೆದು ಅವರವರು ಭಾಗ ಮಾಡಿಕೊಂಡು ಮಾರಾಟ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. 1966 ರಲ್ಲಿಯೇ ವಿಭಾಗ ಮಾಡಿಕೊಂಡಿರುತ್ತಾರೆ ಆ ಬಗ್ಗೆ ದಾಖಲೆ ಇಲ್ಲ. 1964 ರಲ್ಲಿ ಚಿಕ್ಕಹೆಣ್ಣಮ್ಮ ಇವರಿಗೆ ದಾವ ಷೆಡ್ಯೂಲ್ ಆಸ್ತಿಗಳು ದಾನ ಪತ್ರದ ಮೂಲಕ ಬಂದಿರುತ್ತವೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ನಿಪಿ. 35 ರ ಲ್ಲಿರುವ ವಿಷಯವನ್ನು ತಿಳಿದುಕೊಂಡಿರುತ್ತೇವೆ. ನಿಪಿ. 35 ರಲ್ಲಿ ಚಿಕ್ಕಹೆಣ್ಣಮ್ಮರವರಿಗೆ 1963-64 ರಲ್ಲಿ ದಾನಪತ್ರದ ಮೂಲಕ ಬಂದ ಸ್ವತ್ತು ಎಂದು ನಮೂದಾಗಿದೆ ಎಂದರೆ ಸರಿ. ನಿಪಿ. 35 ರಲ್ಲಿ ಸರ್ವೇ ನಂ. 25/1 ರಲ್ಲಿ 29 ಗುಂಟೆ ಮರಿದೇವಮ್ಮ ರವರಿಂದ ನಾನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿ. ನಿಪಿ. 35 ಆಗುವ ಕಾಲಕ್ಕೆ ನನ್ನ ತಂದೆ ಹಾಗೂ ವಾದಿ ಇವರ ತಂದೆಯ ನಡುವೆ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ಮೃತ 1 ನೇ ಪ್ರತಿವಾದಿಯವರಿಗೆ ಸಮಪಾಲು ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ. 35 ಆಗುವ ಕಾಲಕ್ಕೆ ವಾದಿ ಹಾಗೂ 1 ನೇ ಪ್ರತಿವಾದಿಯವರ ನಡುವೆಯೂ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಾನು ತೆಗೆದುಕೊಳ್ಳುವ ಕಾಲಕ್ಕೆ ವಾದಿ ಹಾಗೂ 1 ನೇ ಪ್ರತಿವಾದಿ ಇವರ ಹೆಸರಿನಲ್ಲಿ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಖಾತೆ ಆಗದೇ ಇರುವ ಕಾರಣ ಕ್ರಯಪತ್ರವನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.